ಶ್ರೀ ಕೆ. ಕೊಟ್ರಬಸವನ ಗೌಡ.—ತಾವು ಈಗ ಇಲ್ಲಿ ತಿಳಿಸಿರತಕ್ಕಂಥ ನಿಬಂಧನೆಗಳನ್ನೆಲ್ಲಾ ಕಡ್ಡಾಯವಾಗಿ ಪಾಲಿಸಿಕೊಂಡು ಬರುತ್ತಿದ್ದೀರಾ ?

*ಶ್ರೀ ಎಚ್. ಸಿದ್ದವೀರಪ್ಪ.—ಹೌದು.

ಶ್ರೀ ಕೆ. ಕೊಟ್ರಬಸವನ ಗೌಡ—ಮೈಸೂರು ಸ್ಟೇಟಿನಲ್ಲಿ ಈ ಪೋಲೀಸ್ ಕಾರ್ಪೆಸ್ಟೇಬಲ್‌ಗಳ ಫಿಜಿಕಲ್ ಸ್ಟ್ಯಾಂಡರ್ಡ್ ಬಹಳ ಕಡಮೆಯಾಗಿದೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಹಾಗೊಂದು ವೇಳೆ ಕಡಮೆ ಇದ್ದರೆ ಆದು ವಿದ್ಯಾ ಅರ್ಹತೆಯಲ್ಲರಬಹುದೇ ಶಿವಾಯಿ ಫಿಜಿಕಲ್ ಫಿಟ್‌ನೆಸ್‌ನಲ್ಲೇನೂ ಇವರು ಕಡಮೆಯಾಗಿರುವುದಿಲ್ಲ.

ಶ್ರೀ ಕೆ. ಕೊಟ್ರಬಸವನ ಗೌಡ.—ಅವರನ್ನು ನೋಡಿದರೆ ಒಣಗಿದ ಮಾನಿನ ಹಾಗೆ ಇರುವುದು ಕಾಣುವುದಿಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಹಾಗೆ ಅವರು ಒಣಗಿದ ಮಾನಿನ ಹಾಗೆ ಕಂಡರೂ ಶಕ್ತವಂತರಾಗಿರುತ್ತಾರೆ.

Chief Minister's Tours (Police escort).

Q.—233. Sri V. VENKATAPPA (Channapatna).—

Will the Government be pleased to state :—

(*a*) whether it is a fact that the Police, carried in vans, are being employed for escorting the Chief Minister during his tours in certain areas ;

(*b*) the number of policemen of different grades drafted on during the time of the visits of the Chief Minister to Mandya on 26th January 1956 and Kengal Hanumantharaya Temple on 27th January 1956 ;

(*c*) the number of police and other vans engaged for transporting the police to those places and the places from which they were drafted on ;

(*d*) what is the total cost by way of T. A., batta, etc., incurred for such employment ?

A.—Sri H. SIDDAVEERAPPA (Minister for Home).—

(*a*) No.

(*b*) None was deputed mainly for Chief Minister's visit. For maintenance of law and order, taking the local situation into consideration, the Inspector General of Police had, in his discretion, made the following arrangement :—

On 26th January 1956.—

4 Police Inspectors ;
6 Sub-Inspectors of Police ;
12 Daffedars ;
80 Police Constables and a platoon of M.A.R.P.

On 27th January 1956.—

1 Assistant Superintendent of Police ;
1Police Inspector ;
2 Sub-Inspectors of Police ;
3 Daffedars ;
30 Police Constables

Two Sections and two platoons of M.A.R.P. had been posted.

(*c*)

On 26th January 1956.—

Bangalore to Mandya—One Van ;

On 27th January 1956.—

Channapata to Kengal Hanumantharaya Temple—One Van and Bangalore to Kengal Hanumantharaya Temple—One van and one Land Rover Jeep.

(*d*) About Rs. 142.

ಶ್ರೀ ವಿ. ವೆಂಕಟಪ್ಪ.—ಮೊದಲು ತಾವು ಇಲ್ಲಿ (ಎ)ಗೆ ಉತ್ತರವಾಗಿ ನಿಜವಲ್ಲ ಎಂದು ಹೇಳಿ ಅನಂತರ ಇಷ್ಟಿಷ್ಟು ಜನ ಪೋಲೀಸಿನವರು ಹೋಗಿದ್ದರು ಎಂದು ಉತ್ತರದಲ್ಲಿ ತಿಳಿಸಿರುವುದು ಒಂಥಕ್ಕೊಂದು ವ್ಯತ್ಯಾಸವಾಗುವುದಿಲ್ಲವೇ ?

*ಶ್ರೀ ಎಚ್. ಸಿದ್ದವೀರಪ್ಪ.—(ಎ) ಪ್ರಶ್ನೆಗೆ ಉತ್ತರವಾಗಿ 'ಇಲ್ಲ' ಎಂದು ತಿಳಿಸಿದೆ. ಇನ್ನು ಬಾಕಿ ವಿಚಾರಗಳಿಗೆಲ್ಲಾ ಅವರ ಸ್ವಾತಂತ್ರ್ಯಕ್ಕನುಸಾರವಾಗಿ ಐ.ಜಿ.ಪಿ. ಅವರಿಗೆ ಆ ರೀತಿ ಜನರನ್ನು ಡೆಪ್ಯೂಟ್ ಮಾಡಲು ಅಧಿಕಾರವಿದೆ. ಅದರಂತೆ ಅವರು ಮಾಡಿದ್ದಾರೆ. ಚನ್ನಪಟ್ಟಣದಿಂದ ಕೆಂಗಲ್ ಹನುಮಂತರಾಯನ ದೇವಸ್ಥಾನಕ್ಕೆ ಒಂದು ವ್ಯಾನು ಮತ್ತು ಬೆಂಗಳೂರಿನಿಂದ ಆ ದೇವಸ್ಥಾನಕ್ಕೆ ಮತ್ತೊಂದು ವ್ಯಾನ್ ಹೋಗಿತ್ತು. ಈ ಬೆಂಗಳೂರಿನಿಂದ ಆ ದೇವಸ್ಥಾನಕ್ಕೆ ಹೊರಟಿದ್ದ ವ್ಯಾನು ಮಂಡ್ಯಾಕ್ಕೂ ಹೋಗಿ ಬರತಕ್ಕಂಥ ವ್ಯಾನಾಗಿತ್ತು. ಆಗಲೇ ಬೆಂಗಳೂರಿಂದ ಒಂದು ಸ್ಪೆಷಲ್ ಪ್ಲಟೂನ್ ಕೂಡ ಹೋಗಿತ್ತು. It is a duty cast on the I.G.P. to make proper arrangements.

ಶ್ರೀ ವಿ. ವೆಂಕಟಪ್ಪ.—ಹಾಗಾದರೆ ಇವರು ಆ ರೀತಿ ಬಂದೋಬಸ್ತು ಕೊಡಬೇಕೆಂದು ಕೇಳಿದ್ದರೋ ?

ಶ್ರೀ ಎಚ್. ಸಿದ್ದವೀರಪ್ಪ.—ಅವರೇನೂ ಕೇಳಿರಲಿಲ್ಲ. ನಾವೇ ಮಾಡಿದ್ದೆವು.

ಶ್ರೀ ವಿ. ವೆಂಕಟಪ್ಪ.—ಎಲ್ಲಾ ಕಡೆಗಳಲ್ಲೂ ಅವರು ಹೋಗತಕ್ಕ ಕಡೆ ಹೀಗೆ ಮಾಡಿದ್ದೀರೋ ?

ಶ್ರೀ ಎಚ್. ಸಿದ್ದವೀರಪ್ಪ.—ನಮಯ ಸಂದರ್ಭ ಗಳನ್ನು ನೋಡಿಕೊಂಡು ಅವಶ್ಯಕವೆಂದು ಕಂಡುಬಂದ ಕಡೆಗಳಲ್ಲಿ ಮಾತ್ರ ಮಾಡಲಾಗುತ್ತದೆ.

ಶ್ರೀ ವಿ. ವೆಂಕಟಪ್ಪ.—ಮಂಡ್ಯದಲ್ಲಿ ಅಷ್ಟು ಪೋಲೀಸ್ ಸಿಬ್ಬಂದಿ ಹಾಕಲು ಅಂಥಾ ಅವಕಾಶ ಅಥವ ಸಂದರ್ಭಗಳೇನಿದ್ದವು ?

ಶ್ರೀ ಎಚ್. ಸಿದ್ದವೀರಪ್ಪ.—ಕೆಲವು ಕಡೆ S.R.C. ವರಧಿಯ ವಿಚಾರದಲ್ಲಿ ಜನರಿಗೊಂದುರೀತಿಯಾದ ಭಾವನೆ ಮೂಡಿತ್ತು. ಆ ವೇಳೆಯಲ್ಲಿ ಅಂಥ ಒಂದು ವಾತಾವರಣ ಮೂಡಿತ್ತು. ಆದುದರಿಂದ ಆ ಬಗ್ಗೆ ಯಾರೇ ಸಭೆಗಳನ್ನು ನಡೆಸಲಿ, ಎಲ್ಲಯೇ ನಡೆಸಲಿ ಐ.ಜಿ.ಪಿ. ಯವರು ದೇಶದಲ್ಲಿ ಶಾಂತಿ ಪಾಲನೆಯ ದೃಷ್ಟಿಯಿಂದ ಆ ರೀತಿ ಸ್ಪೆಷಲ್ ಅರೆಂಜ್‌ಮೆಂಟುಗಳನ್ನು ಮಾಡಿದ್ದರು.

ಶ್ರೀ ವಿ. ವೆಂಕಟಪ್ಪ.—ಈ ವಿಲೀನ ವಿರೋಧ ಸಂಘ ದವರಲ್ಲದವರು ಸಭೆಗಳನ್ನು ಕರೆದಿದ್ದ ಕಡೆಗಳಲ್ಲೂ ಕೂಡ ಹೀಗೆ ಮಾಡಲಾಗಿತ್ತೇನು ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು.

ಶ್ರೀ ವಿ. ವೆಂಕಟಪ್ಪ.—ಆ ದಿವಸ ಅಲ್ಲಿಗೆ ಈ ಐ.ಜಿ.ಪಿ. ಯವರು ಮುಂದಾಗಿಯೇ ಹೋಗಿದ್ದರೋ ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು, ಹೋಗಿದ್ದರು. I do not know whether the I.G.P. had made special arrangements. ಆ ದಿವಸ ಅವರು ಕೂಡ ಅಲ್ಲಿದ್ದರೆಂದು ನನಗೆ ಜೆನ್ನಾಗಿ ನೆನಪಿದೆ.

ಶ್ರೀ ವಿ. ವೆಂಕಟಪ್ಪ.—ಆ ಆಂಜನೇಯನ ಗುಡಿ ಹತ್ತಿರ ಆ ಐ.ಜಿ.ಪಿ. ಅವರು ಹೋಗಿದ್ದರೇ ?

Sri H. SIDDAVEERAPPA.—I do not know.

ಶ್ರೀ ವಿ. ವೆಂಕಟಪ್ಪ.—'142 ರೂಪಾಯಿಗಳು ನುಮಾರು ಖರ್ಚಾಗಿದೆ' ಎಂದು ಹೇಳಿದ್ದೀರಿ, ನುಮಾರು ಎಂದರೆ ಇದರ ಅರ್ಥವೇನು ?

ಶ್ರೀ ಎಚ್. ಸಿದ್ದವೀರಪ್ಪ.—ಈ ಟಿ. ಎ. ರೋಕರ್ ಪೋಲೀಸಿನವರುಗಳಿಗೆ ಕೊಡುವುದಿಲ್ಲ. ಬೆಂಗಳೂರಿಂದ ಹೋಗಿದ್ದಂಥ ವ್ಯಾನುಗಳಿಗೆ ಪೆಟ್ರೋಲ್ ಇತ್ಯಾದಿಗಳ ಬಗ್ಗೆ ಖರ್ಚಾಗಿರುವ ಮೊಬಲಗಿದು. ನುಮಾರು ಎಂದರೆ ಚಿಲ್ಲರೆ ಆಣೆ ಕಾಸುಗಳನ್ನು ಬಿಟ್ಟು ಬಿಟ್ಟಿದೆ ಎಂದು ಅದರ ಅರ್ಥ.

ಶ್ರೀ ವಿ. ವೆಂಕಟಪ್ಪ.—ಎಲ್ಲ ಕಡೆಗಳಲ್ಲೂ ಒಂದೇ ರೀತಿ ಬಂದೋಬಸ್ತು ಮಾಡುತ್ತೇವೆಂದು ಹೇಳಿದ್ದವರು ಕೈಲಾಂಚದಲ್ಲಿ ನಡೆದ ಮೊಟಂಗಿಗೆ ತಾವೇಕೆ ಇಂಥ ಪೋಲೀಸ್ ಏರ್ಪಾಡನ್ನು ಮಾಡಿರಲಿಲ್ಲ !

ಶ್ರೀ ಎಚ್. ಸಿದ್ದವೀರಪ್ಪ.—ಅಲ್ಲಯೂ ಅಂಥ ಪೋಲೀಸ್ ಅರೇಂಜ್‌ಮೆಂಟ್ ಮಾಡುತ್ತಿದ್ದೆವು. ಆದರೆ ಕೈಲಾಂಚದಲ್ಲಿ ಅವರ ಡಿಫೆನ್ಸಿಗೆ ಅವರದೇ ಒಂದು ಸ್ಪೆಷಲ್ ಅರೇಂಜ್‌ಮೆಂಟ್ ಇದ್ದುದರಿಂದ ನಾವೇನೂ ಮಾಡಲಿಲ್ಲ.

ಶ್ರೀ ವಿ. ವೆಂಕಟಪ್ಪ.—ಆ ದಾರಿಯಲ್ಲ ಏಟುಗಳನ್ನು ತಿಂದದ್ದೋ ?

ಅಧ್ಯಕ್ಷರು.—ಅದು ಆಕಸ್ಮಿಕವಾಗಿ ಆದದ್ದು !

12-30 P.M.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಚೀಫ್ ಮಿನಿ ಸ್ಟರು ಮಂಡ್ಯಕ್ಕೆ ಹಿಂದೆ ಅನೇಕ ಸಾರಿ ಬಂದಾಗ ಈ ರೀತಿ ಪೋಲೀಸ್ ವ್ಯವಸ್ಥೆ ಇತ್ತೇ ?

ಶ್ರೀ ಎಚ್. ಸಿದ್ದವೀರಪ್ಪ.—ಇಲ್ಲ. ಆಗ ಇಂಥ ಪರಿಸ್ಥಿತಿ ಇರಲಿಲ್ಲ.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಸ್ಥಳದ ಆಫೀಸರು ಗಳು ಅಲ್ಲಿ ಶಾಂತಿ ನೆಮ್ಮದಿಗೆ ಭಂಗ ಬರುತ್ತದೆಂದು ಭಾವಿಸಿ ಪೋಲೀಸ್ ಸಿಬ್ಬಂದಿ ಬೇಕು ಎಂದು ರಿಪೋರ್ಟ್ ಕಳುಹಿಸಿರಲಿಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಅವರು ಏನೇನು ಹೇಳಿ ದ್ದಾರೆ ಎನ್ನುವುದು ಕಾನ್ಫಿಡೆಷಿಯಲ್. ಅದನ್ನು ಹೇಳುವುದಕ್ಕಾಗುವುದಿಲ್ಲ.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಆ ಸ್ಥಳದ ಜನ ಸೌಜನ್ಯತೆಯಿಂದ ಇದ್ದವರು, ಆದ್ದರಿಂದ ಈ ರೀತಿ ಸಿಬ್ಬಂದಿ ಅನಗತ್ಯವಾಗಿತ್ತು ಎಂದು ನಾನು ಭಾವಿಸಿ ದರೆ ಒಪ್ಪಿಕೊಳ್ಳುತ್ತೀರಾ ?

Sri K. HANUMANTHAIYA.—I am very glad to hear the admission made by my friend that the people of that area are generally very good.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ವಿಶೇಷ ಸಿಬ್ಬಂದಿ ಜೊತೆಗೆ ಸಾಮಾನ್ಯವಾಗಿ ಕೆಲಸಮಾಡಿದಂಥ ಪೋಲೀಸ್‌ನವರ ಸಂಖ್ಯೆ ಎಷ್ಟು ?

ಶ್ರೀ ಎಚ್. ಸಿದ್ದವೀರಪ್ಪ.—ಶ್ರೀಮಾನ್ ವೆಂಕಟಪ್ಪ ನವರ ಪ್ರಶ್ನೆಗೆ ಕೊಟ್ಟಿರುವ ಉತ್ತರದಲ್ಲಿ ಸಾಮಾನ್ಯ ಮತ್ತು ವಿಶೇಷ ಸಿಬ್ಬಂದಿ ಎರಡೂ ಸೇರಿವೆ.

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ಅದಲ್ಲದೆ ಮಫ್ತಿ ಯಲ್ಲಿದ್ದ ಸಿ.ಐ.ಡಿ. ಸಂಖ್ಯೆ ಎಷ್ಟು ?

ಶ್ರೀ ಎಚ್. ಸಿದ್ದವೀರಪ್ಪ.—ಸಿ.ಐ.ಡಿ. ಎಂದರೆ ಯಾವಾಗಲೂ ಗುಟ್ಟಾಗಿಯೇ ಇರುವುದು. ಅದನ್ನು ತಿಳಿಸುವುದಿಲ್ಲ.

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ಯಾರು ಸಿ.ಐ.ಡಿ. ಎನ್ನುವುದು ಜನರಿಗೆ ಗೊತ್ತಾಗದೇ ಇರಬಹುದು. ಆದರೆ ಎಷ್ಟು ಜನಗಳನ್ನು ತಾವು ಕೆಲಸದ ಮೇಲೆ ನೇಮಿಸಿದ್ದೀರಿ ಎಂಬ ಲೆಕ್ಕ ಸರ್ಕಾರದವರ ಹತ್ತಿರ ಇರುವುದಿಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ನಮ್ಮ ಹತ್ತಿರ ಇರು ತ್ತದೆ. It is not in public interest to disclose.

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ಈ ಸಭೆ ನಡೆ ದದ್ದು ಥಿಯೇಟರ್‌ನಲ್ಲಿ ಅಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು.

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ನುಮಾರು ಎಷ್ಟು ಜನ ಸೇರಿದ್ದರು ?

ಶ್ರೀ ಎಚ್. ಸಿದ್ದವೀರಪ್ಪ.—ಥಿಯೇಟರ್ ತುಂಬಿ ದ್ದರು ಎಂದು ವರದಿ ಬಂದಿದೆ. ನುಮಾರು 4,5 ಸಾವಿರ ಜನಕ್ಕೆ ಕಡಿಮೆ ಇರಲಾರದು. The house was full.

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ಈ ಥಿಯೇಟರ್ ಬಾಗಿಲನ್ನಲ್ಲಿ ಬಂದೂಕ ಇಟ್ಟುಕೊಂಡು ಪೋಲೀಸ್ ನವರು ಕಾಯುತ್ತ ಇದ್ದರು ಎಂದು ವರ್ತಮಾನ ಬಂದಿದೆ, ಅದು ನಿಜವೇ ?

ಶ್ರೀ ಎಚ್. ಸಿದ್ದವೀರಪ್ಪ.—ಅವರು ಡ್ಯೂಟಿ ಮೇಲೆ ಇದ್ದರು.